# ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ,ಆಯುಕ್ತರ ಕಛೇರಿ, ನೃಪತುಂಗ ರಸ್ತೆ,ಬೆಂಗಳೂರು-560001**

No. CPI/SATS/C1/ಕಛೇರಿ ಟಿಪ್ಪಣಿಗಳು/03/2022-23 ದಿನಾಂಕ : 09.05.2022

## ಸುತ್ತೋಲೆ

ವಿಷಯ : 2022-23 ನೇ ಸಾಲಿನಲ್ಲಿ ಶಾಲಾ ವಿದ್ಯಾರ್ಥಿಗಳ ದಾಖಲೆಯನ್ನು SATS ನಲ್ಲಿ ನಿರ್ವಹಿಸುವ ಬಗ್ಗೆ

ಉಲ್ಲೇಖ : 1. ಈ ಕಚೇರಿ ಜ್ಞಾಪನ ಪತ್ರ ಸಂಖ್ಯೆ: ಎಡಿಎಂ.2[1]:ಶೈ.ವ.ನಿ:02:2021-22, ದಿನಾಂಕ : 23.02.2022

2. ಈ ಕಚೇರಿ ಸುತ್ತೋಲೆ ಸಂಖ್ಯೆ : ಸಿ4(6) ಶೈ.ವ.ಪ್ರಾ-01/2022-23, ದಿನಾಂಕ : 20.04.2022.

*********

ಉಲ್ಲೇಖಿತ ಪತ್ರ/ಸುತ್ತೋಲೆಯ ಬಗ್ಗೆ ಗಮನಸೆಳೆಯಲಾಗಿದೆ. ಉಲ್ಲೇಖ (1)ರ ಪತ್ರದಲ್ಲಿ 2021-22ನೇ ಶೈಕ್ಷಣಿಕ ವರ್ಷವು 09 ಏಪ್ರಿಲ್ 2022ರಂದು ಅಂತ್ಯವಾಗುವುದರಿಂದ 01 ರಿಂದ 09ನೇ ತರಗತಿಯ ವಾರ್ಷಿಕ ಪರೀಕ್ಷೆಗಳನ್ನು ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲು ವೇಳಾಪಟ್ಟಿಯನ್ನು ನೀಡಲಾಗಿದೆ. ಅದರನ್ವಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಫಲಿತಾಂಶವನ್ನು ಎಸ್.ಎ.ಟಿ.ಎಸ್.ನಲ್ಲಿ ದಿನಾಂಕ : 09.04.2022 ರಿಂದ 16.04.2022ರೊಳಗೆ ಘೋಷಣೆ ಮಾಡಲು ಸೂಚಿಸಲಾಗಿರುತ್ತದೆ. ಆದರೆ SATS ತಂತ್ರಾಂಶದಲ್ಲಿ ಪೂರ್ಣಗೊಳಿಸದೆ ಇರುವುದನ್ನು ಗಮನಿಸಲಾಗಿದೆ.

ಉಲ್ಲೇಖ (2)ರ ಸುತ್ತೋಲೆಯಲ್ಲಿ 2022-23ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಕ್ರಿಯಾ ಯೋಜನೆ ಅನುಷ್ಠಾನದ ಬಗ್ಗೆ ಸವಿವರವಾಗಿ ತಿಳಿಸಲಾಗಿದ್ದು, ದಿನಾಂಕ : 16.05.2022ರಿಂದ ಶೈಕ್ಷಣಿಕ ವರ್ಷ ಪ್ರಾರಂಭವಾಗಲಿದೆ.

ಈ ಹಿನ್ನಲೆಯಲ್ಲಿ 2022-23 ನೇ ಸಾಲಿನಲ್ಲಿ ಶಾಲಾ ವಿದ್ಯಾರ್ಥಿಗಳ ದಾಖಲೆಯನ್ನು SATS ನಲ್ಲಿ ಕೆಳಕಂಡ ವೇಳಾಪಟ್ಟಿಯಂತೆ ದಾಖಲಿಸಲು ಅಗತ್ಯಕ್ರಮಕೈಗೊಳ್ಳಲು ಸೂಚಿಸಿದೆ.

| ಕ್ರ.ಸಂ. | ವಿವರ | ನಿಗಧಿಪಡಿಸಿದ ದಿನಾಂಕ |
|---|---|---|
| 1 | ಫಲಿತಾಂಶವನ್ನು SATS ನಲ್ಲಿ ಇಂಧೀಕರಿಸುವುದು | ಅಂತಿಮ ದಿನಾಂಕ : 14.05.2022 |
| 2 | SATS ನಲ್ಲಿ ಮುಂದಿನ ತರಗತಿಗೆ ಉತ್ತೀರ್ಣ ನೀಡುವುದು | ಅಂತಿಮ ದಿನಾಂಕ : 14.05.2022 |
| 3 | SATS ನಲ್ಲಿ ಮಕ್ಕಳ ವರ್ಗಾವಣೆ ಪತ್ರ ನೀಡುವುದು | 16.05.2022 ರಿಂದ 31.07.2022 |
| 4 | ಉತ್ತೀರ್ಣ ಮಾಡಲಾದ ಹಾಗು ಹೊಸದಾಗಿ ದಾಕಲಾದ ಮಕ್ಕಳನ್ನು SATS ನಲ್ಲಿ ದಾಖಲು ಮಾಡಿಕೊಳ್ಳುವುದು | 16.05.2022 ರಿಂದ 31.07.2022 |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

7/5/22

**ಇವರಿಗೆ,**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಕಳುಹಿಸುತ್ತಾ ಮೇಲ್ಕಂಡಂತೆ ಕ್ರಮವಹಿಸಲು ತಿಳಿಸಿದೆ.